

## ವಿಘ್ನೇಶ್ವರ ಅಲ್ಲ ವಿಘ್ನೇಶ್ವರಿ

ಸರ್ವವಿಘ್ನ ವಿನಾಯಕ ತಮಿಳುನಾಡಿನ ಶುಚೀಂದ್ರಂನ ತನುಮಲಯಸ್ವಾಮಿ ದೇವಸ್ಥಾನದಲ್ಲಿ ಸ್ತ್ರೀ ರೂಪದಲ್ಲಿ ಕಾಣಿಸಿಕೊಂಡು ಎಲ್ಲರನ್ನು ಅಚ್ಚರಿಗೊಳಪಡಿಸಿದ್ದಾನೆ. ನಾವೆಲ್ಲರೂ ತಿಳಿದಿರುವಂತೆ ಗಣಪತಿ ಪುರುಷ. ಆದರೆ ಈ ದೇಗುಲದಲ್ಲಿ ಗಣಪ ಪುರುಷ ಮತ್ತು ಸ್ತ್ರೀ ರೂಪದ ಸಂಯೋಜನೆಯಾಗಿದ್ದಾನೆ. ಇಲ್ಲಿನ ವಿನಾಯಕನನ್ನು ವಿಘ್ನೇಶ್ವರಿ, ಗಜಾನನಿ ಎಂದೂ ಕರೆಯುತ್ತಾರೆ. ಇಂತಹ ಮೂರ್ತಿ ವಿಶ್ವದಲ್ಲಿ ಬಹಳ ಅಪರೂಪ. ಶುಚೀಂದ್ರಂನ ತನುಮಲಯಸ್ವಾಮಿ ದೇವಾಲಯವು ಕೇರಳ ಮತ್ತು ತಮಿಳುನಾಡಿನ ಶೈಲಿಯ ವಾಸ್ತುಶಿಲ್ಪ ಕಲಾಪ್ರಕಾರವನ್ನು ಹೊಂದಿರುವ ಅಪರೂಪದ ದೇಗುಲ. ಅಲ್ಲದೆ ಶಿಲ್ಪಕಲೆಯ ವೈಭೋಗಕ್ಕೆ ಹೆಸರಾಗಿದೆ. ಇಲ್ಲಿನ ರಾಜಗೋಪುರದ ಶಿಲ್ಪಕಲೆ ದೇಶದಲ್ಲೇ ಹೆಸರಾಗಿದೆ.

–ಶಶಿರೇಖಾ ನಾಗೇಂದ್ರ, ತುಮಕೂರು



## ಡೌನ್‌ಟೌನ್ ಜಾರ್ಜ್‌ಟೌನ್

ಇದು ಅಮೆರಿಕದಲ್ಲಿ ಇರುವ ಡೌನ್‌ಟೌನ್ ಜಾರ್ಜ್‌ಟೌನ್ (Downtown Georgetown) ಎಂಬ ಒಂದು ಊರಿನ ದೃಶ್ಯ. ಒಂದು ಅಚ್ಚುಕಟ್ಟಾಗಿ, ಪೋಸ್ಟ್ ಕಾರ್ಡ್‌ನಂತೆ ಕಾಣುವ ಈ ಊರು ವಿಕ್ಟೋರಿಯಾ ಯುಗದ ಕಟ್ಟಡಗಳಿಂದ ಕೂಡಿದೆ. ಗ್ರಾಮದ ಅಲ್ಲಲ್ಲಿ ನೇತಾಡುವ ಹೂವಿನ ಬುಟ್ಟಿಗಳು, ಅಮೆರಿಕದ ಧ್ವಜಗಳು, ಸುಂದರವಾದ ಮಳಿಗೆಗಳು ಹಳ್ಳಿಯ ಸೊಬಗನ್ನು ಹೆಚ್ಚಿಸಿವೆ. ಪ್ರವಾಸಿಗರನ್ನು ಸೆಳೆಯುವ ಇನ್ನೊಂದು ಆಕರ್ಷಣೆಯೆಂದರೆ ಅಲ್ಲಿದ್ದ ಮೂರು ಅಡಿಯ ನ್ಯಾರೊ ಗೇಜ್ ಮೇಲೆ ಸಾಗುವ ಹಳೆಯ ಉಗಿ ಬಂಡಿ. ಇದು ರಾಕಿ ಪರ್ವತಗಳ ಸುತ್ತಮುತ್ತಲಿನ 2 ಮೈಲಿ ದೂರ ಪ್ರವಾಸಿಗರನ್ನು ಕರೆದುಕೊಂಡು ಹೋಗಿಬರುತ್ತದೆ. 1884ರಲ್ಲಿ ಗಣಿಗಾರಿಕೆಯ ಸಲುವಾಗಿ ಸ್ಥಾಪನೆಗೊಂಡ ಈ ಉಗಿಬಂಡಿಯು ಆಗಿನ ಕಾಲದಲ್ಲಿ ಅದಿರು ಸಾಗಿಸುವ ಬಂಡಿಯಾಗಿತ್ತಂತೆ. ನಗರದ ಹೂವಿನ ಅಲಂಕಾರಕ್ಕೆ ಬಳಸಿದ್ದು ಬಹಳ ವಿಶೇಷವಾಗಿದೆ.

–ಎಸ್. ಶಿವಪ್ರಸಾದ್, ಶಿವಮೊಗ್ಗ





## ಹೀಗೊಂದು ಹೆಜ್ಜೇನು ಗೂಡು

ಸಾಮಾನ್ಯವಾಗಿ ಹೆಜ್ಜೇನುಗಳು ಎತ್ತರದ ಮರಗಳಲ್ಲಿ ಭೂಮಿಗೆ ಸಮಾನಾಂತರವಾಗಿ ಗೂಡನ್ನು ಕಟ್ಟುತ್ತವೆ. ಆದರೆ ನಮ್ಮ ಮನೆಯ ಮುಂದಿನ ತೆಂಗಿನ ಮರದಲ್ಲಿ ಹೆಜ್ಜೇನು ಭೂಮಿಗೆ ಲಂಬವಾಗಿ ಗೂಡು ಕಟ್ಟುವ ಮೂಲಕ ಆಶ್ಚರ್ಯ ಉಂಟು ಮಾಡಿದೆ. ಎತ್ತರದ ಮರಗಳಲ್ಲಿ ದೊಡ್ಡ ಕೊಂಬೆಗೆ ಹೊಂದಿಕೊಂಡು ಸಾಮಾನ್ಯವಾಗಿ ಹೆಜ್ಜೇನುಗಳು ಗೂಡು ಕಟ್ಟುತ್ತವೆ. ಇದರಿಂದ ಬಿಸಿಲು, ಮಳೆಯಿಂದ ಗೂಡಿಗೆ, ಜೇನು ನೊಣಗಳಿಗೆ ರಕ್ಷಣೆಯೂ ಸಿಗುತ್ತದೆ. ಇವುಗಳ ಗೂಡು 5 ಅಡಿವರೆಗೂ ಉದ್ದ ಇರುತ್ತದೆ. ಮರಕ್ಕೆ ಲಂಬವಾಗಿ ಹೆಜ್ಜೇನುಗಳು ನೆಲೆಯೂರುವ ಮೂಲಕ ಅಚ್ಚರಿ ಉಂಟು ಮಾಡಿದವು. ಭಾರತದ ಅತೀ ದೊಡ್ಡ ಜೇನು ವರ್ಗಕ್ಕೆ ಸೇರಿರುವ ಹೆಜ್ಜೇನುಗಳು ಹೊಸ ಸಂಪ್ರದಾಯಕ್ಕೆ ಅಡಿ ಇಟ್ಟಂತೆ ಅನಿಸಿತು.

–ಅರುಣ್ ಕಿಲ್ಲೂರು